**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 1359/2022**

**ಫಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಅಬಕಾರಿ ಉಪ ನಿರೀಕ್ಷಕರು.2,
ಚನ್ನರಾಯಪಟ್ಟಣ ವಲಯ.

**ವಿರುದ್ದ**

**ಆರೋಪಿತರುಃ** ಯೋಗೀಶ ಬಿನ್ ಕಾಳೇಗೌಡ,
50 ವರ್ಷ ವಯಸ್ಸು,
ವಾಸಃ ಜನಿವಾರ ಗ್ರಾಮ,
ಕಸಬಾ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು,
ಹಾಸನ ಜಿಲ್ಲೆ.

**ದೋಷಾರೋಪಣೆ**

ದಿನಾಂಕಃ 13.05.2022 ರಂದು ಸಂಜೆ 7.10 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಚನ್ನರಾಯಪಟ್ಟಣ ತಾಲ್ಲೂಕು, ಕಸಬಾ ಹೋಬಳಿ, ಜನಿವಾರ ಗ್ರಾಮದ ಜನಿವಾರ ಕೆರೆಯ ಏರಿಯ ಮೇಲೆ ಆರೋಪಿಯಾದ ನೀವು ಸುಮಾರು 252 ಗ್ರಾಂ ನಷ್ಟು ಒಣ ಗಾಂಜಾವನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ಸ್ವಾಧೀನ ಹೊಂದಿ, ಅಕ್ರಮ ಸಾಕಾಣಿಕೆ ಮಾಡಿ, ಆ ಮೂಲಕ ಆರೋಪಿಯಾದ ನೀವು **ಎನ್.ಡಿ.ಪಿ.ಎಸ್. ಕಾಯ್ದೆ ಕಲಂ. 8(ಸಿ)** ರ ನಿಯಮಗಳನ್ನು **ಉಲ್ಲಂಘಿಸಿ, ಇದೇ ಕಾಯ್ದೆ ಕಲಂ.20(ಬಿ)(ii)(A)** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**ಪ್ರಶ್ನೆ:** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆಯು ನಿಮಗೆ ತಿಳಿಯಿತೆ ?

ಉತ್ತರ: ಅರ್ಥವಾಯಿತು

**ಪ್ರಶ್ನೆ:** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ ?

ಉತ್ತರ: ವಿಚಾರಣೆಯಾಗಬೇಕು

(ಈ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿಯು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕ: **20.06.2024**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ